## ವಾ ತಾಜ್..!

ಮೈಸೂರಿನ ಸೂಕ್ಷ್ಮ ಕೆತ್ತನೆಯ ಕಲಾವಿದ ನಾಗೇಶ್ ಎಂ.ಪಿ. ಅವರು ಕಾಷ್ಟದಲ್ಲಿ ತಾಜಮಹಲ್‌ನ್ನು ನಿರ್ಮಿಸಿದ್ದಾರೆ. 2.5 ಅಡಿ ಎತ್ತರದ, ನಾಲ್ಕು ಅಡಿ ಉದ್ದದ ಈ ತಾಜ್‌ಮಹಲ್ ಶಿವಾನಿ ಕಟ್ಟಿಗೆಯಿಂದ ರಚಿಸಿದ್ದಾರೆ. ಇದನ್ನು ನಿರ್ಮಿಸಲು ಆರು ತಿಂಗಳನ್ನು ತೆಗೆದುಕೊಂಡಿದ್ದಾರಂತೆ. ಇದನ್ನು ನೋಡಿದವರು ಬೆರಗುಗಣ್ಣಿನಿಂದ 'ವಾ ತಾಜ್!' ಹೇಳದೆ ಇರಲಾರರು. ಕಲಾಪ್ರೇಮಿಗಳಿಗೆಲ್ಲ ಇಷ್ಟ ಆಗುವಂತೆ ನಾಜೂಕಿನ ಕುಶಲ ಕಲೆಗಾರಿಕೆಯನ್ನು ಈ ಆಕೃತಿಯಲ್ಲಿ ಅವರು ಮೂಡಿಸಿದ್ದಾರೆ.

—ಈರಣ್ಣ ಬೆಂಗಾಲಿ, ರಾಯಚೂರು



## ಕಣ್ಮರೆಯಾಗುತ್ತಿರುವ ಗರಡಿ

ಮೊದಲು ಹಳ್ಳಿ ಹಳ್ಳಿಯ ಹೃದಯಭಾಗದಲ್ಲಿ ದೇಹವನ್ನು ಹುರಿಗೊಳಿಸುವ ಗರಡಿ ಮನೆಯೊಂದು ಇರುತ್ತಿತ್ತು. ಮುಂಜಾನೆ ಮತ್ತು ಸಂಜೆಯ ಹೊತ್ತಿನಲ್ಲಿ ಊರಿನ ಯುವಕರು ಗರಡಿ ಮನೆ ಹೊಕ್ಕರೆ ಮಂದ ಬೆಳಕಿನಲ್ಲಿ ಬೆವರು ಬಸಿಯುತ್ತಿದ್ದರು. ಸಮಬಲದವರ ಜೊತೆ ಕುಸ್ತಿಯ ಪಟ್ಟುಗಳನ್ನು ಅಭ್ಯಾಸ ಮಾಡುವುದರ ಜೊತೆಗೆ ಕೆಮ್ಮಣ್ಣಿನ ಘಮಲಿನಲ್ಲಿ ಕಲ್ಲು ಗುಂಡು ಎತ್ತುವುದು, ಕಟ್ಟಿಗೆ ಗದೆ ತಿರುವುದು ಮಾಡುತ್ತಿದ್ದರು. ಹಿರಿಯ ಕುಸ್ತಿಪಟುಗಳು ಮಾರ್ಗದರ್ಶನ ಮಾಡುತ್ತಿದ್ದರು. ಊರಿನ ಜಾತ್ರೆ, ಹಬ್ಬ, ಹರಿದಿನಗಳಲ್ಲಿ ಸಾರ್ವಜನಿಕವಾಗಿ ಏರ್ಪಡಿಸುತ್ತಿದ್ದ ಕುಸ್ತಿ ನೋಡುವುದು ಕಣ್ಣಿಗೆ ಹಬ್ಬವಾಗಿತ್ತು.

ಇತ್ತೀಚಿನ ದಿನಗಳಲ್ಲಿ ಗರಡಿ ಮನೆಗಳೂ ಅಳಿವಿನಂಚಿನಲ್ಲಿವೆ. ಕೆಲವೆಡೆ ಅನ್ಯಕಾರ್ಯಕ್ಕೆ ಅವು ಬಳಕೆಯಾಗುತ್ತಿವೆ. ಪ್ರಸ್ತುತ ಚಿತ್ರ ಗದಗ ತಾಲ್ಲೂಕಿನ ಕಣವಿಯ ಗ್ರಾಮದ್ದು.

—ಮೈಲಾರಪ್ಪ ಬೂದಿಹಾಳ, ಮುಗಿಲಹಕ್ಕಿ





## ತೆಂಗಿನ ಸ್ವಗತ

ನನ್ನ ಜಾತಿಯ ಎಲ್ಲರೂ ನೇರ ಮತ್ತು ಲಂಬವಾಗಿ ಬೆಳೆಯುತ್ತಾರೆ. ಆದರೆ ನಾನು 'ಎಲ್ಲರಂತಿರಬೇಡ, ಭಿನ್ನವಾಗಿರು, ಜನ ಗುರುತಿಸುತ್ತಾರೆ' ಎಂದು ತಾಯಿ ಮಕ್ಕಳಿಗೆ ಹೇಳುವುದನ್ನು ಅರ್ಥ ಮಾಡಿಕೊಂಡು ನಾನೂ ಹಾಗೆ ಬೆಳೆದೆ. ನನ್ನನ್ನು ನೀವು ಕಾರ್ಕಳದಿಂದ ಧರ್ಮಸ್ಥಳಕ್ಕೆ ಹೋಗುವ ಹೆದ್ದಾರಿಯಲ್ಲಿ ಬರುವ ಹೊಸಮಾರು ಎಂಬ ಊರಿನ ಬಸ್ ನಿಲ್ದಾಣದ ಹತ್ತಿರ ನೋಡಬಹುದು. ನಾನು ಬೆಳೆದಿದ್ದು ಅಂಕು ಡೊಂಕಾದರೂ ಫಲ ಕೊಡುವಲ್ಲಿ ಕಡಿಮೆ ಮಾಡಲಿಲ್ಲ. 'ಪರೋಪಕಾರಂ ಇದಂ ಶರೀರಂ' ಎಂಬುದು ನಮ್ಮಂತಹ ಕಲ್ಪವೃಕ್ಷಕ್ಕೆ ತಾನೇ ಹೇಳುವುದು?

—ಎಸ್. ಶಿಶುಪಾಲ ದಾವಣಗೆರೆ